## 2

ಮಲ್ಲಿಕಾ ಲೆಹರ್ ಟೀವಿ ಚಾನಲ್ಲಿನ ಸಿನಿಮಾ ಸೆಕ್ಷನ್ ಸೇರಿದ ಮೇಲೆ ರಂಜಿತಾ ಸೇನ್ ಹತ್ತಾರು ಸಲ ಸಿಕ್ಕಿದ್ದಳು. ಮಲ್ಲಿಕಾ ಕರೆದಾಗಲೆಲ್ಲ ಚಾನಲ್ಲಿಗೆ ಬಂದು ನಗುನಗುತ್ತಾ ಗಿಲಿಗಿಲಿ ಮಾತಾಡಿ, 'ಲವ್ ಯೂ ಮಲ್ಲಿಕಾ' ಎಂದು ಅಪ್ಪಿ ಮುತ್ತಿಟ್ಟು ಹೋಗಿದ್ದಳು. ಬೆಂಗಳೂರಿಗೆ ಬಂದ ಎರಡೇ ವರ್ಷದಲ್ಲಿ ನಡುನಡುವೆ ಇಂಗ್ಲಿಷ್ ಪದಗಳನ್ನು ಬೆರೆಸಿ, ಆರಾಮಾಗಿ ಕನ್ನಡ ಮಾತಾಡುತ್ತಿದ್ದಳು... ಕಲಕತ್ತಾದ ಸುಪ್ರಸಿದ್ಧ ಡಾನ್ಸರ್ ಅಭಿಜಿತ್ ಮುಖರ್ಜಿಯವರ ಶಿಷ್ಯೆಯಾಗಿ ಗೌಡಿಯಾ ನೃತ್ಯ ಶೈಲಿಯ ಅದ್ಭುತ ನರ್ತಕಿಯಾಗಿದ್ದ ರಂಜಿತಾ ನಿಂತರೆ ಲಯ, ನಡೆದರೆ ಲಯ, ಕೂತರೆ ಲಯ, ನಕ್ಕರೆ ಲಯ... 'ಬಾ ಮಲ್ಲಿಕಾ' ಎಂದು ತನ್ನ ನೀಳ ತೋಳು ಚಾಚಿ ಕರೆದರೆ ಲಯ... ರಂಜಿತಾ ಎಂದರೆ ಲಯ...

ಇದೇ ರಂಜಿತಾ ಇದ್ದಕ್ಕಿದ್ದಂತೆ ಯಾವ ವಿಷಯಕ್ಕಾದರೂ ತಲೆಕೆಡಿಸಿಕೊಂಡಳೆಂದರೆ ಅವಳ ಎಲ್ಲ ಲಯಗಳೂ ದಿಕ್ಕೆಡುತ್ತಿದ್ದವು! ಮನುಷ್ಯರಲ್ಲಿ ಕಾಣಬರುವ ಬಹುತೇಕ ಲಯಗಳು ಕೃತಕ ಎಂಬುದನ್ನು ಕಂಡಿದ್ದ ಮಲ್ಲಿಕಾಗೆ ರಂಜಿತಾ ಲಯಗಳು ಮಾತ್ರ ಹುಟ್ಟಿನಿಂದಲೇ ಅವಳ ಜೊತೆಗಿದ್ದಂತೆ ಕಾಣುತ್ತಿದ್ದವು; ಅಷ್ಟೊಂದು ಸಹಜವಾಗಿದ್ದ ಆ ಲಯಗಳೆಲ್ಲ ಅವಳು ವ್ಯಗ್ರಳಾದ ತಕ್ಷಣ ಎಲ್ಲಿ ಮಾಯವಾಗುತ್ತವೆ ಎಂದು ಮಲ್ಲಿಕಾಗೆ ವಿಸ್ಮಯವಾಗುತ್ತಿತ್ತು. ರಂಜಿತಾ ಯಾವುದಕ್ಕೆ ಉದ್ವಿಗ್ನಳಾಗುತ್ತಾಳೆ, ಯಾವುದಕ್ಕೆ ಆಗುವುದಿಲ್ಲ ಎಂಬುದನ್ನು ಊಹಿಸುವುದೇ ಕಷ್ಟವಾಗಿತ್ತು. ಮಲ್ಲಿಕಾ ಟೀವಿ ಚಾನಲ್ ರಿಪೋರ್ಟರ್ ಆಗಿದ್ದರೂ ಅವಳು 'ಆಫ್ ದಿ ರೆಕಾರ್ಡ್' ನೈತಿಕತೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದುದನ್ನು ಖಾತ್ರಿ ಮಾಡಿಕೊಂಡ ಮೇಲೆ ರಂಜಿತಾ ಮಲ್ಲಿಕಾಗೆ ತೀರಾ ಹತ್ತಿರವಾಗಿದ್ದಳು. ಮಲ್ಲಿಕಾ ರಂಜಿತಾ ಮನೆಗೆ ಹೋದಾಗ ಎಷ್ಟೋ ಸಲ ಸೀದಾ ತನ್ನ ಬೆಡ್ ರೂಮಿಗೇ ಕರೆದುಕೊಂಡು ಹೋಗಿ, ಹಾಸಿಗೆಯ ಮೇಲೆ ಆರಾಮಾಗಿ ಕಾಲು ಚಾಚಿ ಮಂಚಕ್ಕೊರಗಿ ಎದೆಗೆ ತಲೆದಿಂಬು ಒತ್ತಿಕೊಳ್ಳುತ್ತಾ ಏನೆಲ್ಲ ಹೇಳಿಕೊಳ್ಳುತ್ತಿದ್ದಳು...

ರಂಜಿತಾ ಹಾಗೆ ಬಿಡುಬೀಸಾಗಿ ಮಾತಾಡುತ್ತಿದ್ದರೆ ತಮ್ಮಿಬ್ಬರ ಕಷ್ಟಗಳಲ್ಲಿರುವ ಕೆಲವು ಹೋಲಿಕೆಗಳು ಮಲ್ಲಿಕಾಗೆ ಕಾಣತೊಡಗುತ್ತಿದ್ದವು:

ರಂಜಿತಾ ಎಂಬ ಪ್ರಖ್ಯಾತ ನಟಿಗೆ ಹೋಲಿಸಿದರೆ ತಾನು ತಕ್ಕಮಟ್ಟಿನ ಫೇಮಸ್ ರಿಪೋರ್ಟರ್—ಆ್ಯಂಕರ್ ಮಾತ್ರವೇ ಆಗಿದ್ದರೂ... ಇಬ್ಬರೂ ಹೆಚ್ಚುಕಡಿಮೆ ಒಂದೇ ಥರದ ಕಷ್ಟಗಳಲ್ಲಿ, ನಿತ್ಯದ ಪರ್ಫಾರ್ಮೆನ್ಸುಗಳ ಒತ್ತಡಗಳಲ್ಲಿ ಸಿಕ್ಕಿಕೊಂಡು ಚಿಂದಿಯಾಗುತ್ತಿದ್ದೆವು ಎಂಬುದು ಮಲ್ಲಿಕಾಗೆ ಗೊತ್ತಾಯಿತು. ನೃತ್ಯದಲ್ಲಿ ಮಾಸ್ಟರ್ಸ್ ಪದವಿ ಪಡೆದು ಬಂಗಾಳದ ಗೌಡಿಯಾ ನೃತ್ಯ ಕುರಿತು ಡಾಕ್ಟರೇಟ್ ಮಾಡುತ್ತಿದ್ದಾಗಲೇ ಒಂದು ಬಂಗಾಳಿ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿ ಸ್ಟಾರ್ ಆಗಿಬಿಟ್ಟ ರಂಜಿತಾ; ಇತ್ತ ಮುಂಬಯಿಯವರೆಗೂ ಹೋಗಿ ಮೀಡಿಯಾ ಸ್ಟಡೀಸ್‌ನಲ್ಲಿ ಫಸ್ಟ್ ರ್‍ಯಾಂಕ್ ಪಡೆದು ಬಂದಿರುವ ತಾನು... ಇಬ್ಬರಿಗೂ ಹೆಚ್ಚುಕಡಿಮೆ ಒಂದೇ ಥರದ ಇರಿಸುಮುರಿಸುಗಳಿವೆ ಎಂಬುದು ಮಲ್ಲಿಕಾಗೆ ಅರಿವಾಗತೊಡಗಿತು.

ಆದರೆ, ರಂಜಿತಾಗೆ ಎದುರಾಗುತ್ತಿದ್ದ ತಳಮಳಗಳು ಮಲ್ಲಿಕಾಳ ತಳಮಳಗಳಿಗಿಂತ ತೀವ್ರವಾಗಿರುತ್ತಿದ್ದವು. ತನ್ನ ಸಿನಿಮಾಗಳ ಬಗ್ಗೆ ಸಣ್ಣ ಪುಟ್ಟ ತರಲೆ ಕಾಮೆಂಟುಗಳು ಬಂದರೂ ರಂಜಿತಾಗೆ ನಿದ್ದೆ ಕೆಡುತ್ತಿತ್ತು. ಇನ್ನು ದೊಡ್ಡ ಮಟ್ಟದ ಟೀಕೆಗಳು ಬಂದರಂತೂ ಕೇಳುವಂತೆಯೇ ಇರಲಿಲ್ಲ. ಅವತ್ತು ಅವಳ ಡಾನ್ಸ್ ಪರ್ಫಾರ್ಮೆನ್ಸ್ ಬಗ್ಗೆ ಯಾವುದೋ ಪೇಪರಿನಲ್ಲಿ ಕೆಟ್ಟ ರಿವ್ಯೂ ಬಂದಿತ್ತು. ಅದನ್ನು ನೋಡಿ ರಂಜಿತಾ ಎಷ್ಟು ತಲೆ ಕೆಡಿಸಿಕೊಂಡಿದ್ದಳೆಂದರೆ ಮಲ್ಲಿಕಾ ಅವಳ ಮನೆಯೊಳಗೆ ಅಡಿಯಿಟ್ಟ ತಕ್ಷಣ ಅವಳಿಗೆ ತೆಕ್ಕೆ ಬಿದ್ದು, 'ಮಲ್ಲಿಕಾ! ಐ ಆಮ್ ರೂಯಿನ್ಡ್!' ಎಂದು ಬಿಕ್ಕಿದ್ದಳು. ರಂಜಿತಾ ಕೂಡ ತಾನು ಬಲ್ಲ ಹಲವು ಹುಡುಗಿಯರಂತೆ—ಅಥವಾ ಥೇಟ್ ತನ್ನಂತೆಯೇ!—